ಮಧ್ಯೆ ಕಳೆದುಹೋದರು. ಇಲ್ಲಿ ಸಾಹಿತ್ಯ ಸಂಭ್ರಮಕ್ಕೆ ಬರುತ್ತಿದ್ದರೂ ಕೊನೆಗಾಲದಲ್ಲಿ ಉಸಿರಾಟದ ತೊಂದರೆ ಕಾಯಿಲೆಯಾಗಿ ಕಾಡಿತ್ತು. ಆಕ್ಸಿಜನ್ ಸಿಲಿಂಡರ್ ಹೊತ್ತುಕೊಂಡು ಅಲೆದಾಡಬೇಕಾದಂಥ ಬೇಸರದ ಕಾಯಿಲೆ ಅವರನ್ನು ಜನ ಸಂಪರ್ಕದಿಂದ ಸ್ವಲ್ಪ ದೂರಗೊಳಿಸಿತ್ತು. ಆ 2–3 ವರ್ಷ ಅಂಥ ಸ್ಥಿತಿಯಲ್ಲಿ ನಮ್ಮ ಗಿರೀಶರನ್ನು ನೋಡಲು ಕೆಟ್ಟೆನಿಸುತ್ತಿತ್ತು.

ಈಚೆಗೆ ಗಿರೀಶ ಧಾರವಾಡಕ್ಕೆ ಬರುವುದು ಕಡಿಮೆ ಆಗಿತ್ತು. ತೀರುವ ಸ್ವಲ್ಪ ಕಾಲ ಮೊದಲು ಸಾರಸ್ವತಪುರದ ತಮ್ಮ ಪ್ರಾಚೀನ, ಐತಿಹಾಸಿಕ ಮನೆಯನ್ನು ಮಾರಲು ನಿರ್ಧರಿಸಿದ್ದು ತಿಳಿಯಿತು. ಅದು ಅವರಿಗೆ ಅನಿವಾರ್ಯವಾಗಿದ್ದಿರಬಹುದು. ಧಾರವಾಡದ ನಾವು ಯಾರೂ ಅವರ ಸಮಸ್ಯೆಯನ್ನು ಅರಿಯಲು, ಪರಿಹರಿಸಲು ಸಾಧ್ಯವಿರಲಿಲ್ಲ. ಆದರೂ ನಮಗೆ ನಮ್ಮದೇ ಮನೆಯನ್ನು ಮಾರಲಿಟ್ಟಿದ್ದ ಹಾಗೆ ನೋವಾಗಿತ್ತು. ಸಾಲಿ ರಾಮಚಂದ್ರರಾಯರ ಮೊಮ್ಮಕ್ಕಳು ಸಪ್ತಾಪುರದಲ್ಲಿದ್ದ ಸಾಲಿಯವರ ಪುರಾತನ ಮನೆ, ಖುಲ್ಲಾ ಜಾಗ ಮಾರಲಿಟ್ಟಾಗಲೂ ನಮಗೆ ಹೀಗೇ ನೋವಾಗಿತ್ತು. ಗಿರೀಶ ತಮ್ಮ ಮನೆಯನ್ನು ಮಾರಿದ್ದನ್ನು ತಿಳಿದು, ಪತ್ರಿಕೆಯಲ್ಲಿ ಓದಿ ಕಾರ್ನಾಡ ಕುಟುಂಬದ ಅಭಿಮಾನಿಗಳಿಗೆ ಬೇಸರವಾಗಿದ್ದು ಸಹಜ. ಅದನ್ನು ಕೊಂಡವರಿಗೆ ಆ ಆಸ್ತಿಯನ್ನು ಹಸ್ತಾಂತರಿಸುವ ಹೊತ್ತಿನಲ್ಲಿ ಸ್ವತಃ ಗಿರೀಶರನ್ನು ಅವರ ಬಾಲ್ಯದ, ಯೌವನದ, ಕೃತಿರಚನೆಯ, ಪಾಲಕರ, ಸಖ ಸಖಿಯರ ಜೊತೆಗಿನ ಎಷ್ಟೊಂದು ಏನೇನು ನೆನಪುಗಳು, ನೋವುಗಳು ಕಲಕಿರಬಹುದು ಎಂಬುದನ್ನು ಕಲ್ಪಿಸಿಕೊಂಡರೆ ಗಿರೀಶರಲ್ಲಿ ನಾವೂ ಸೇರಿಕೊಳ್ಳುತ್ತೇವೆ. ಬಹುಶಃ ಒಂದಿಲ್ಲ ಒಂದು ಸಲ ಬೇರೆ ಬೇರೆ ಆಕಾರ, ರೂಪ ತಳೆದು ಇಂಥ ಪ್ರಸಂಗಗಳು ನಮ್ಮನ್ನೂ ಆವರಿಸಬಹುದು ಎಂಬುದನ್ನು ಅರ್ಥವಿಸಿಕೊಳ್ಳಬೇಕು.

ಗಿರೀಶರ ನಿಧನಾನಂತರ ಡಾ. ಸರಸ್ವತಿ ಮತ್ತು ಮಕ್ಕಳು ಗಿರೀಶರಿಗೆ ಪ್ರಿಯವಾಗಿದ್ದ ಧಾರವಾಡದ ಶಾಲ್ಮಲೆಯಲ್ಲಿಯೇ ಅಸ್ಥಿವಿಸರ್ಜನೆ ಮಾಡಬಯಸಿದ್ದರು. ಅಲ್ಲಿಯ ಅಶುಚಿ ಅವರಿಗೆ ಇಷ್ಟವಾಗಲಿಲ್ಲ. ಮತ್ತೆ ಬಹುಶಃ ಮಲಪ್ರಭೆಯ ವರೆಗೆ ಹೋಗಿ ಬಂದರು. ಗಿರೀಶರಿಗೆ ಹತ್ತಿರದವರಾಗಿದ್ದ ನಮ್ಮಂಥ ಕೆಲವರನ್ನು ಆಮಂತ್ರಿಸಿ, ಅವರ ನೆನಪಿನಲ್ಲಿ ಒಂದು ಸ್ಮರಣಕೂಟ ನಡೆಸಿದರು. ಗಿರೀಶರನ್ನು ನೆನೆಸಿ ನಾವು ಕೆಲವರು ಮಾತಾಡಿದೆವು. ಅಂದು ಧಾರವಾಡದಲ್ಲಿ ಮೊದಲ ಬಾರಿಗೆ ರಘು ಕಾರ್ನಾಡರನ್ನು ಕಂಡಿದ್ದೆವು. ಅವರು ಅಪ್ಪನಿಗಿಂತ ಅದ್ಭುತ ಇಂಗ್ಲಿಷಿನಲ್ಲಿ ಅಪ್ಪನ ಬಗ್ಗೆ ಹಳಹಳಿಸಿದರು. ಧಾರವಾಡದ ಅಪ್ಪಟ ಕನ್ನಡದಲ್ಲಿ ಸಹಜವಾಗಿ, ನಿರರ್ಗಳವಾಗಿ ಮಾತಾಡುತ್ತಿದ್ದ ಗಿರೀಶರು, ಅವರ ಮಾತು, ದನಿ ನೆನಪಾದುವು. ಮೊನ್ನೆ, ಈಚೆಗೆ ಚಿತ್ರಾ ಫಿಲ್ಮ್ ಸೊಸೈಟಿಯ ಕಾರ್ಯಕ್ರಮದಲ್ಲಿ 'ಅಪ್ಪಾ'ನನ್ನು ನೆನೆಸಿ ಅಪ್ಪಟ ಇಂಗ್ಲಿಷಿನಲ್ಲಿ ಮಾತಾಡಿದ ರಘು ಸಮೇತ ಪ್ರಮುಖರ ದನಿ ಕೇಳಿ, ಗಿರೀಶ ಮತ್ತೆ ಮರುಕಳಿಸಿದರು.

ಐರಿಶ್ ನಾಟಕಕಾರ ಸೀನ್ ಓ'ಕ್ಯಾಸಿ ಸೂಚಿಸಿ, ಅಪೇಕ್ಷಿಸಿದಂತೆ, ಗಿರೀಶ ತಾವೂ ಭಾರತೀಯ ಸಾಹಿತ್ಯ ಮತ್ತು ಕಲಾಜಗತ್ತಿನ ದೊಡ್ಡ ತಾರೆಯಾಗಿ, ಮಿಂಚಿ ಅಸ್ತಮಿಸಿದರು. ಆದರೆ ಸಾರಸ್ವತಪುರದ ಗುಡ್ಡದ ತುತ್ತ ತುದಿಯಲ್ಲಿರುವ ಆ ಸುವಿಶಾಲ ಬಂಗಲೆಯಲ್ಲಿ, ಕಾರ್ನಾಡ ಕುಟುಂಬದ ನೆಪದಲ್ಲಿ, ಹೆಸರಿನಲ್ಲಿ ಸಂಗ್ರಹಗೊಂಡಿದ್ದ, ನಮ್ಮ ನಡುವೆಯೇ ಬದುಕಿದ್ದ, ಆಡಿದ್ದ ಕೂಡಿದ್ದ ಮಹಾನ್ ಪ್ರತಿಭಾವಂತ ಕಲಾವಿದನೊಬ್ಬನ ಅಸಂಖ್ಯ ಸ್ಮರಣಚಿತ್ರಗಳ, ವಸ್ತುಗಳ, ಅಪೂರ್ವ ದಾಖಲೆಗಳ ಸಂಪುಟವನ್ನು ಗರ್ಭದಲ್ಲಿ ಇಟ್ಟುಕೊಂಡಿದ್ದ ಆ ಸಂದುಕದ ಸ್ಥಿತಿ ಏನಾಯಿತು? ಅದರಲ್ಲಿದ್ದ 400 ಪುಟದ ಒಂದು ದೊಡ್ಡ ನೋಟ್‌ಬುಕ್ಕಿನ ತುಂಬ ಗಿರೀಶ ಅದು ವರೆಗೆ ಪ್ರಕಟವಾಗಿದ್ದ ತಮ್ಮ ಎಲ್ಲ ಕವನಗಳನ್ನು, ಅವು ಪ್ರಕಟಗೊಂಡ ದಿನಾಂಕವಾರು ಬರೆದು ಇಟ್ಟುಕೊಂಡಿದ್ದುದನ್ನು ನೋಡಿದ್ದೆ. ಅದನ್ನು ಒಮ್ಮೆ ಖಂಡಿತವಾಗಿಯೂ ಪ್ರಕಟಿಸೋಣ ಎಂಬ ನನ್ನ ಸಲಹೆಯನ್ನು ಮನಸಾರೆ ಒಪ್ಪಿಕೊಂಡಿದ್ದರು. ಆ ಪುಸ್ತಕವನ್ನು, ಆ ಸಂದುಕವನ್ನು ಅಕ್ಕರೆಯಿಂದ ಬೆರಗಿನಿಂದ ಅಭಿಮಾನದಿಂದ ಕಂಡಿದ್ದೆ, ಅಲ್ಲಿ ಹೋದಾಗಲೆಲ್ಲ ಮೆಲುವಾಗಿ ಮುಟ್ಟಿ ನೋಡುತ್ತಿದ್ದೆ; ಆ ಎಲ್ಲ ನೆನಪುಗಳ ವಿದ್ಯುತ್ ಸರಪಳಿ ಈಗ ನನ್ನನ್ನು ಸುತ್ತಿಕೊಳ್ಳುತ್ತಿದೆ...

●